# ‘ನಾನು ನೀನು, ಆನು ತಾನು...’

ಇಂಗ್ಲೀಷ್‌ನಲ್ಲಿ ಒಂದು ಹೇಳಿಕೆ ಇದೆ, ‘ದೇವರು ನಮ್ಮೆಲ್ಲ ಸಂಬಂಧಿಗಳನ್ನು ಸೃಷ್ಟಿಸಿಕೊಟ್ಟ, ಆದ್ರೆ, ಥ್ಯಾಂಕ್ ಗಾಡ್! ನಮ್ಮ ಸ್ನೇಹಿತರನ್ನ ನಮಗೇ ಆಯ್ಕೆ ಮಾಡ್ಕೋಳೋಕೆ ಬಿಟ್ಟ!’ ನಾವೆಲ್ಲರೂ ಎಷ್ಟೇ ಮನೋಮಯರಾಗಿದ್ದರೂ, ಏಕಾಂಗಿಗಳಾಗಿದ್ದರೂ ಜೀವನದ ಯಾವುದೊಂದಾರೂ ಹಂತದಲ್ಲಿ ಸ್ನೇಹಿತರನ್ನು ಸಂಪಾದಿಸಿರುತ್ತೇವೆ, ಸ್ನೇಹಮಯಿಗಳಾಗಿರುತ್ತೇವೆ.

ಉತ್ತಮ ಸ್ನೇಹ ಕೂಡ ಪ್ರೇಮದ ತರವೇ ಶುರುವಾಗುತ್ತದೆ ಅನಿಸುತ್ತದೆ, ಕೆಲವೆಲ್ಲ ಮೊದಲನೇ ಭೇಟಿಯಲ್ಲೇ. ಇನ್ನು ಕೆಲವೆಲ್ಲ ಬಹಳಷ್ಟು ಭೇಟಿ, ಮಾತುಕತೆ, ಪರಸ್ಪರ ಅರಿಯುವಿಕೆಯ ನಂತರ. ಇನ್ನೂ ಕೆಲವಂತೂ ವರ್ಷಾನುಗಟ್ಟಲೆ ಒಡನಾಟವಿದ್ದರೂ ‘ಪರಿಚಯ ಕ್ಕಿಂತ ಮುಂದುವರೆದಿರುವುದಿಲ್ಲ.

ನಾವೆಲ್ಲರೂ ನಮಗೆ ಗೊತ್ತಿಲ್ಲದೆಯೋ ಗೊತ್ತಿದ್ದೋ ಈ ಎಲ್ಲ ಸ್ನೇಹಿತರನ್ನು ವಿವಿಧ ಮಟ್ಟದಲ್ಲಿ ಮನಸಿನೊಳಕ್ಕೆ ಬಿಟ್ಟುಕೊಂಡಿರುತ್ತೇವೆ. ಯಾವ ಸ್ನೇಹಿತರ ಜೊತೆ, ಏನು ಮಾತನಾಡಬೇಕು, ಎಲ್ಲಿಯವರೆಗೆ ಮಾತನಾಡಬೇಕೆಂದು ನಮ್ಮ ಮನಸಿಗೆ ಗೊತ್ತಿರುತ್ತದೆ. ಅವರೊಡನೆ ಎಷ್ಟು ತೆರೆದುಕೊಳ್ಳಬೇಕೆಂದು ನಾವು ಮೊದಲೇ (ಹಿಂದಿನ ಒಡನಾಟಗಳಿಂದ) ತೀರ್ಮಾನಿಸಿರುತ್ತೇವೆ. ಹೀಗೆ ಪಟ್ಟಿಮಾಡುತ್ತ ಹೋದರೆ ನಿಮಗೂ ನಿಮ್ಮ ಸ್ನೇಹಿತರಲ್ಲೇ ಬರೀ ಪರಿಚಿತರು, ಸ್ನೇಹಿತರು, ತುಂಬಾ ಒಳ್ಳೇ ಸ್ನೇಹಿತರು, ಹೀಗೆ ನಾಲ್ಕಾರು ಗುಂಪುಸಿಗಬಹುದು. ಇದು ನನ್ನ ಸ್ನೇಹಿತರ ಪಟ್ಟಿ.

ಬರೀ ಪರಿಚಿತರನ್ನ ನಾನು ಬಹುವಚನವಿಲ್ಲದೇ ಸಂಬೋಧಿಸುವುದೇ ಇಲ್ಲ. ಬಹಳ ದಿನದ ಪರಿಚಯದ ನಂತರವೂ ನಾನು ಅವರನ್ನು ಗೌರವಪೂರ್ವಕವಾಗಿಯೇ ಮಾತನಾಡಿಸುತಿದ್ದೇನೆ, ಸಾರಿ, ಥ್ಯಾಂಕ್ಸ್, ಪ್ಲೀಸ್‌ಗಳನ್ನು ಉಪಯೋಗಿಸುತಿದ್ದೇನೆ ಎಂದರೆ ನನಗೆ ಅವರು ಬರೀ ಪರಿಚಿತರು, ಅವರೊಡನೆ ನಾನು ಲೋಕಾಭಿರಾಮವಲ್ಲದ, ಸ್ವಲ್ಪ ಖಾಸಗಿಯಾದ ವಿಷಯಗಳನ್ನೂ ಮಾತನಾಡುವುದಿಲ್ಲ. ಅವರು ಸಿಕ್ಕರೆ ಮೂರನೇ ವಾಕ್ಯದೊಂದಿಗೆ ನನ್ನ ಮಾತುಗಳೆಲ್ಲ ಮುಗಿದುಹೋಗಿರುತ್ತವೆ, ಬಹುಶಃ ನನ್ನ ಮದುವೆಯ ಆಹ್ವಾನಪತ್ರಿಕೆಯನ್ನು ಹೆಚ್ಚಿನ ಸಾಲುಗಳ ಸೇರಿಸದೇ ಅವರಿಗೆ ಪೋಸ್ಟ್ ಮಾಡುತ್ತೇನೆ.

ಇನ್ನು ನನ್ನ ಸಹೋದ್ಯೋಗಿಗಳು, ನನ್ನಂತಹ ಮುಖೇಡಿಯನ್ನು ಅವರಾಗಿಯೇ ಎಳೆದು ತಮ್ಮ ಗುಂಪಿನೊಳಕ್ಕೆ ಸೇರಿಸಿಕೊಂಡರೆ, ಅವರಲ್ಲಿ ಕೆಲವರು ನನ್ನ ವೇವ್‌ಲೆಂತ್‌ನವರೇ ಆದರೆ ನಾನು ಬಹುವಚನ ಬಿಟ್ಟು ಬಿಡುತ್ತೇನೆ. ಖಾಸಗಿ ವಿಷಯಗಳೆಲ್ಲ, ಕೀಟಲೆಗಳೆಲ್ಲ ಶುರುವಾಗಿಬಿಡುತ್ತವೆ. ಸಾಮಾನ್ಯವಾಗಿ ಸಮಾನ ವಯಸ್ಕ, ಮನಸ್ಕರಾದವರೊಂದಿಗೆ ನಾನು ಹೆಚ್ಚು ಬೆರೆಯಲಾರೆ. ನನ್ನ ವ್ಯಕ್ತಿತ್ವಕ್ಕೆ ತದ್ವಿರುದ್ಧವಾದವರೊಂದಿಗೇ ನನಗೆ ಹೊಂದಾಣಿಕೆ ಹೆಚ್ಚು ಸಾಧ್ಯ. (ಬಹುಶಃ ಇದು ತಂತಮ್ಮ ಐಡೆಂಟಿಟಿಯನ್ನು ಕಾಪಾಡಿಕೊಳ್ಳಲು ಪ್ರತಿಯೊಬ್ಬರೂ ಮಾಡುವ ಪ್ರಯತ್ನ). ಇಲ್ಲದಿದ್ದರೆ ತೀರಾ ಕೆಲಸಕ್ಕೆ ಸಂಬಂಧಿಸಿದ ವಿಷಯಗಳಿಲ್ಲದಿದ್ದರೆ ನಾನು ಅವರನ್ನು ಮಾತನಾಡಿಸುವುದೇ ಇಲ್ಲ. ನನ್ನ ಇತರ ಸ್ನೇಹಿತರು ನನ್ನನ್ನು ನೋಡಿ ಗೇಲಿ ಮಾಡುತ್ತಾರೆ, ‘ಆ ಕಂಪನಿಯಲ್ಲಿ ಎರಡುವರ್ಷ ಕೆಲಸ ಮಾಡಿದ್ರೂ ಹುಡುಗಿಯರ್ನ ಮಾತಾಡ್ಸಿಲ್ಲ ನೀನು, ಎಲ್ಲರ ಹೆಸರೂ ಗೊತ್ತಿಲ್ಲ ನಿನಗೆ  ಅಂತ.

ನನ್ನ ಸ್ನೇಹಿತರು, ಬಹಳಷ್ಟು ವರ್ಷಗಳಿಂದ ನನ್ನೊಂದಿಗೇ ಓದಿದವರು, ನನ್ನೊಂದಿಗೇ ಕೆಲಸ ಮಾಡಿದವರೆಲ್ಲ ಮೂರನೇ ಗುಂಪಿಗೆ ಬರುತ್ತಾರೆ. ಅವರ ಬಹಳಷ್ಟು ಖಾಸಗಿ ವಿಷಯಗಳೆಲ್ಲ ನನಗೆ ಗೊತ್ತು. ನನ್ನ ಇಂಜಿನಿಯರಿಂಗ್ ಡಿಟೈನ್ ಆದದ್ದು ಅವರಿಗೂ ಗೊತ್ತು, ನನ್ನ ಭಯ, ಭ್ರಮೆ, ಕನಸುಗಳೂ ಅವರಿಗೆ ಗೊತ್ತು. ಈಗೀಗ ಹೆಚ್ಚೆಚ್ಚು ಸಿಗದಿದ್ದರೂ, ಸಿಕ್ಕಾಗ ಮಾತನಾಡಿಕೊಳ್ಳಲು, ನಗಲು, ಗಂಟೆಗಟ್ಟಲೆ ಚೇಷ್ಟೆಮಾಡಿಕೊಳ್ಳಲು ನಮ್ಮಲ್ಲಿ ಬಹಳಷ್ಟು ವಿಷಯಗಳಿರುತ್ತವೆ. ಇಂತವರೊಡನೆ ನನ್ನ ಯಾವಾಗಿನ ಎಚ್ಚರಿಕೆ ಪೂರ್ತಿ ಮರೆತು ಹೋಗಿರುತ್ತದೆ.

ಕೊನೆಯದಾಗಿ ನನ್ನ ಹೃದಯಕ್ಕೆ ತೀರಾ ಹತ್ತಿರದ ಸ್ನೇಹಿತರು. ಇವರು ನನ್ನ ಹೃದಯಕ್ಕೆ ಹತ್ತಿರಾಗಲು ಯಾವಾಗಲೂ ತುಂಬಾ ಸಮಯ ತೆಗೆದುಕೊಂಡಿರುವುದಿಲ್ಲ. ನಮ್ಮ ಬಳಿ ಮಾತನಾಡಲು ಬಹಳಷ್ಟು ವಿಷಯಗಳಿರುತ್ತವೆ. ನಮ್ಮವು, ಬೇರೆಯರವು, ನಮ್ಮ ಅಭಿರುಚಿಗಳು, ದುಃಖ ದುಮ್ಮಾನಗಳು, ಅಚ್ಚರಿಗಳು, ಎಲ್ಲವೂ, ರಾತ್ರಿಹಗಲೆಲ್ಲ ಮಾತನಾಡಿದರೂ ತೀರದ ವಿಷಯಗಳಿರುತ್ತವೆ. ಅವರೆದುರು ನಾನು ಕನ್ನಡಿಯೆದುರು ನಿಂತಂತಾಗಿಬಿಡುತ್ತೇನೆ. ನಾವು ಮಾತನಾಡುವುದನ್ನು ಕೇಳಿಸಿಕೊಂಡರೆ ನೀವು ನಕ್ಕು ಬಿಡುತ್ತೀರಿ, ಅಚ್ಚರಿಗೊಳಗಾಗುತ್ತೀರಿ. ತೀರಾ ಸಿಲ್ಲಿಯನ್ನಿಸುವ ವಿಷಯಗಳಿಂದ ಹಿಡಿದು (ಮುಂದೆ ಎಲ್ಲರೂ ಮಾತನಾಡುವ ಸ್ವೀಟ್ ನಥಿಂಗ್ಸ್‌ಗೆ ಇದೇ ಮೊದಲನೇ ಮೆಟ್ಟಿಲು ಅನಿಸುತ್ತೆ) ತೀರಾ ಗಂಭೀರವೆನಿಸುವ ವಿಷಯಗಳೂ ನಮ್ಮ ಮಾತುಕತೆಯಲ್ಲಿರುತ್ತದೆ. ಸ್ವಲ್ಪ ಬೈಗುಳ, ಜಗಳ, ತಿವಿಯುವಿಕೆ, ಆರ್ದ್ರತೆ, ನಗು, ಕಾಲೆಳೆಯುವಿಕೆ, ಗಾಂಭೀರ್ಯ, ತೀರಾ ಖಾಸಗಿ, ಮೂರ್ಖತನದ ಮಾತುಗಳು, ಎಲ್ಲವೂ. ಇಂತವರೊಂದಿಗೆ ನಾನು ಪೂರ್ತಿ ನಾನಾಗಿರುತ್ತೇನೆ. ಅವರು ಏನು ತಿಳಿದುಕೊಂಡಾರೆಂಬ ಭಯವಿಲ್ಲ, ಬೇರೆಯವರಿಗೆ ಹೇಳಿಯಾರೆಂಬ ಎಚ್ಚರಿಕೆಯಿಲ್ಲ. ಎಲ್ಲವೂ ಅವರು ಮತ್ತು ನಾನು.

ನಾವೆಲ್ಲರೂ ಕಾಲಾಂತರದಲ್ಲಿ ನಮ್ಮ ಒಡನಾಟಕ್ಕನುಗುಣವಾಗಿ ಪರಿಚಿತರನ್ನು, ಸಹೋದ್ಯೋಗಿಗಳನ್ನು ಸ್ನೇಹಿತರನ್ನಾಗಿ, ಆಪ್ತಮಿತ್ರರನ್ನಾಗಿಸಿಕೊಳ್ಳುವ ಪರಿವರ್ತನ ಕ್ರಿಯೆಯಲ್ಲಿ ತೊಡಗಿಸಿಕೊಂಡಿರುತ್ತೇವೆ. ಬಹುವಚನ ಏಕವಚನವಾಗಿ, ಗೌರವ ಆತ್ಮೀಯತೆಯಾಗುವ ಈ ಪರಿವರ್ತನೆ ಸದಾ ಸಕ್ರಿಯವಾಗಿರುತ್ತದೆ. ನನ್ನ ವಿಷಯದಲ್ಲೂ ಹಾಗೇ.

ನನ್ನೊಬ್ಬ ಹಳೆಯ ಸಹೋದ್ಯೋಗಿ ಮಿತ್ರನೊಬ್ಬ ನನ್ನನ್ನು ಈಗಲೂ 'ನೀವು, ಬನ್ನಿ, ಹೋಗಿ' ಎಂತಲೇ ಮಾತನಾಡಿಸುತ್ತಾನೆ. ಅದೂ ನಾನವನನ್ನು 'ನೀನು, ಹೋಗೋ, ಬಾರೋ' ಎಂದು ಮಾತನಾಡಿಸಲು ಶುರುಮಾಡಿ ಮೂರುವರ್ಷವಾದರೂ :( ಬಹುಶಃ ನನ್ನನ್ನು ಅವನ ಬರಿಯ ಪರಿಚಿತರ ಗುಂಪಿನಲ್ಲೇ ಉಳಿಸಲು ತೀರ್ಮಾನ ಮಾಡಿದ್ದಾನೆ ಅನ್ಸುತ್ತೆ. ಅದವನ ಖಾಸಗಿ ವಿಷಯ. ನಾನ್ಯಾಕೆ ಹೇಳಲಿ, ಮರ್ಯಾದೆ ಬೇಡಪ್ಪಾ ಅಂತ. ಅಷ್ಟಿದ್ದರೆ ಈ ಮೂರುವರ್ಷದಲ್ಲೇ ಅವನು ಈ ಸಂಗತಿಯನ್ನ ಅರ್ಥಮಾಡಿಕೊಳ್ಳಬೇಕಾಗಿತ್ತು ತಾನೇ?

ಇನ್ನೊಬ್ಬ ನನ್ನ ಇ–ಮೈಲ್ ಮಿತ್ರನಿಗೆ ಮೊಟ್ಟ ಮೊದಲು ಫೋನ್ ಮಾಡಿದಾಗ ಅವನು ಮಾತು ಶುರುಮಾಡಿದ್ದೇ 'ನೀವು, ನಾನು' ಅಂತಾ. ಅವನನ್ನು ಭೇಟಿಯಾಗಿರದಿದ್ದರೂ ಅವನು ಬಹುವಚನ ಬಳಸಿದ್ದು, ನನಗೆ ಕಿರಿಕಿರಿ ಉಂಟುಮಾಡಿತ್ತು. ಯಾಕೆಂದರೆ ಅವನನ್ನು ನಾನು ನಾನು ಬೇಕಂತಲೇ ಏಕವಚನದಲ್ಲಿ ಮಾತನಾಡಿಸಿ ನನ್ನ ಸ್ನೇಹಿತರ ಗುಂಪಿಗೆ ಸೇರಿಸಿಕೊಂಡಿದ್ದೆ. ಬೆಂಗಳೂರಿಗೆ ಬಂದಾಗ ಸಿಗುತ್ತೇನೆ ಅಂದಿದ್ದ. ಬೆಂಗಳೂರಿಗೆ ಬಂದು ಫೋನ್ ಮಾಡಿದರೆ 'ನೀವು, ಹೋಗಿ, ಬನ್ನಿ' ಅಂತಾ ಮಾತನಾಡಿಸಿದ್ರೆ ಸಿಗೋದೇ ಇಲ್ಲ ನೋಡು ಅಂತ ಬೈಯ್ಯೋಣವೆಂದುಕೊಂಡಿದ್ದೆ, ಆದರೆ ಅವನು ಮೊದಲ ಕರೆಯಲ್ಲಿ ನಾನು ಕೊಟ್ಟಿದ್ದ ಮೆಸೇಜ್ ಅರ್ಥಮಾಡಿಕೊಂಡಿದ್ದ ಅನಿಸುತ್ತೆ. ಬೆಂಗಳೂರಿಗೆ ಬಂದವನು ಫೋನ್ ಮಾಡಿದ್ದ. ವಾಪಸ್ಸು ಹೋಗುವ ಅವಸರದಲ್ಲೂ ಸಿಕ್ಕಿದ್ದ. ಮಾತುಗಳು 'ನೀವು–ನೀನು, ಹೋಗಿ–ಹೋಗು'ಗಳ ಮಧ್ಯೆ ಹೊಯ್ದಾಡುತಿತ್ತು. ಪರವಾಗಿಲ್ಲ, ಮುಂದಿನ ಕರೆ/ಭೇಟಿಯಲ್ಲಿ ಸಂಪೂರ್ಣವಾಗಿ 'ನೀನು ತಾನು'ಗೆ ಬಂದಿರುತ್ತಾನೆ ಎಂದುಕೊಂಡು ಸುಮ್ಮನಾದೆ!

ಕೊನೆಯದಾಗಿ, ನೀವು ಖಂಡಿತವಾಗಿ ನಾನು ನಿಮ್ಮ ಸ್ನೇಹಿತರ ಯಾವ ಗುಂಪಿನೊಳಗೆ ಬರುತ್ತೇನೆ ಎಂದು ಬೇಕಾದರೆ ಅನಲೈಸ್ ಮಾಡಿಕೊಳ್ಳಿ(ನಾನದನ್ನು ಕೇಳ ಬರುವುದಿಲ್ಲ), ಆದರೆ ನೀವು ನನ್ನ ಸ್ನೇಹಿತರ ಯಾವ ಗುಂಪಿನೊಳಗಿದ್ದೀರಿ ಎಂದು ನನ್ನನ್ನು ಕೇಳಬೇಡಿ, ನನ್ನ ತಲೆತಿನ್ನಬೇಡಿ! ಅದು ನನ್ನ ತೀರಾ ತೀರಾ ಖಾಸಗಿ ರಹಸ್ಯ!

**'ನಾನು, ನೀನು, ಆನು ತಾನು, ನಾಕೇ ನಾಕು ತಂತಿ...'**